ವಿಷಯ : - ಅಡಿಕೆ ಸಂಶೋಧನಾ ಕೇಂದ್ರದ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 124(412)

ಶ್ರೀ ಕರಿಯಣ್ಣ (ಹೊಳೆಹೊನ್ನೂರು)

ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಬೆಳೆಯು ತುಂಬಾ ಪ್ರಾಮುಖ್ಯವಾದ ಬೆಳೆಯಾಗಿರುವುದು ನಿಜವೆ? ಹಾಗಿದ್ದಲ್ಲಿ ಇದಕ್ಕೆ ತಗಲುವ ಅನೇಕ ರೋಗಗಳನ್ನು ತಡೆಗಟ್ಟಲು ಸರ್ಕಾರದವರು ಯಾವುದಾದರೂ ಪರಿಹಾರವನ್ನೇನಾದರೂ ಕಂಡು ಹಿಡಿದಿರುವರೆ?

ಆ)ಈ ಸುಳಿ ಕೊಳೆಯುವ ರೋಗವು ಮನುಷ್ಯನಿಗೆ ಬರುವ ಏಡ್ಸ್ ರೋಗಕ್ಕಿಂತ ಭಯಂಕರವಾಗಿರುವುದರಿಂದ ಶಿವಮೊಗ್ಗದಲ್ಲಿ ಅಡಿಕೆ ರೋಗಗಳಿಗೆ ಸಂಬಂಧಪಟ್ಟ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ) ಇಲ್ಲದಿದ್ದರೆ, ಈ ಬಗ್ಗೆ ರಾಜ್ಯ ಮಟ್ಟದಲ್ಲಿ ಯಾವ ರೀತಿಯ ಪರಿಹಾರವನ್ನು ಕಂಡು ಹಿಡಿಯಲಾಗುತ್ತಿದೆ?

ಶ್ರೀ ಎ.ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) : -

ಹೌದು. ಅಡಿಕೆ ಬೆಳೆಗೆ ತಗಲುವ ಸುಳಿ ಮತ್ತು ಕಾಯಿ ಕೊಳೆಯುವ ರೋಗಗಳು ಪ್ರಮುಖವಾದದ್ದು, ಈ ರೋಗಗಳು ಫೈಟಾಪ್ತರ ಶಿಲೀಂದ್ರದಿಂದ ಹರಡುತ್ತವೆ. ಈ ರೋಗಗಳನ್ನು ನಿಯಂತ್ರಣ ಮಾಡಲು ಶೇಕಡ 1ರ ಬೋರ್ಡೊ ದ್ರಾವಣವನ್ನು ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚೆ ಒಂದು ಸಾರಿ ನಂತರ ಮಳೆಗಾಲದ ಮಧ್ಯದಲ್ಲಿ ಒಂದು ಸಾರಿ ಗಿಡಗಳ ಸುಳಿ ಮತ್ತು ಗೊಂಚಲು ನೆನೆಯುವಂತೆ ಸಿಂಪರಣೆ ಮಾಡುವುದು ಅವಶ್ಯಕ.

ಈ ಸುಳಿ ಮತ್ತು ಕಾಯಿ ಕೊಳೆಯುವ ರೋಗಗಳು ನಿಯಂತ್ರಣಕ್ಕೆ ಬಾರದ ಹೊಸ ರೋಗವೇನೂ ಅಲ್ಲ. ನಿಯಂತ್ರಣ ಕ್ರಮಗಳು ರೂಢಿಯಲ್ಲಿದ್ದು, ಈಗಾಗಲೇ ಆದರಂತೆ ಕಾರ್ಯ ನಿರ್ವಹಿಸಲಾಗುತ್ತಿದೆ. ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸುವುದು ಕೃಷಿ ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಗೆ ಬರುತ್ತದೆ. ಈ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೃಷಿ ವಿಶ್ವವಿದ್ಯಾಲಯದವರನ್ನು ಕೋರಲಾಗುವುದು (ಪ್ರಗತಿಯ ಪಟ್ಟಿಯನ್ನು ಲಗತ್ತಿಸಿದೆ)

ಶೇಕಡ 50ರ ರಿಯಾಯಿತಿ ದರದಲ್ಲಿ ಒಬ್ಬ ಫಲಾನುಭವಿಗೆ ಒಂದು ಹೆಕ್ಟೇರ್‌ಗೆ ಮಾತ್ರ ಗರಿಷ್ಟ ಸಹಾಯಧನ ರೂ. 500.00 ನಂತೆ ವಿತ್ತರಿಸಲಾಗುತ್ತಿದೆ.(ಔಷಧಿ ರೂಪದಲ್ಲಿ)

ವಿವಿಧ ಜಿಲ್ಲೆಗಳಲ್ಲಿ ಕಾಯಿ ಕೊಳೆ ರೋಗ ಮತ್ತು ಅಡಿಕೆ ಹಳದಿ ರೋಗಕ್ಕೆ ನಿಗದಿ ಪಡಿಸಿದ

ಭೌತಿಕ ಆರ್ಥಿಕ ಗುರಿ ಮತ್ತು ಸಾಧನೆ ಪಟ್ಟಿ.

ಕ್ರ ಸಂ.	ಜಿಲ್ಲೆ ಹೆಸರು	ಕಾಯಿಕೊಳೆ ರೋಗ		ಸಾಧನೆ		ಅಡಿಕ ಹಳದಿ ರೋಗ		ಸಾಧನೆ	
		ಭೌತಿಕ	ಆರ್ಥಿಕ (ಲಕ್ಷ)	ಭೌತಿಕ	ಆರ್ಥಿಕ (ಲಕ್ಷ)	ಭೌತಿಕ	ಆರ್ಥಿಕ (ಲಕ್ಷ)	ಭೌತಿಕ	ಆರ್ಥಿಕ (ಲಕ್ಷ)
1992-93									
1.	ಶಿವಮೊಗ್ಗ	470 ಹೆ	2.35	470	2.35	260	0.130	260	0.130
2.	ಕೊಡಗು	150 ಹೆ	0.75	150	0.75	420	0.210	420	0.210
3.	ದಕ್ಷಿಣ ಕನ್ನಡ	1130 ಹೆ	5.65	1130	5.65	590	0.295	590	0.295
4.	ಚಿಕ್ಕಮಗಳೂರು	728 ಹೆ	3.64	728	3.64	390	0.195	390	0.195
5.	ಉತ್ತರ ಕನ್ನಡ	594 ಹೆ	2.97	594	2.97	-	-	-	-
	ಒಟ್ಟು	3072 ಹೆ	15.36	3072	15.36	1660	0.830	1660	0.830
1993-94ನೇ ಸಾಲಿನಲ್ಲಿ ಮಾಡಿರುವ ಪ್ರಸ್ತಾವನೆ: –									
1.	ಶಿವಮೊಗ್ಗ	598 ಹೆ	2.990	-	-	390	0.195	-	-
2.	ಕೊಡಗು	150 ಹೆ	0.750	-	-	420	0.210	-	-
3.	ದಕ್ಷಿಣ ಕನ್ನಡ	1130 ಹೆ	5.650	-	-	590	0.295	-	-
4.	ಚಿಕ್ಕಮಗಳೂರು	728 ಹೆ	3.640	-	-	390	0.195	-	-
5.	ಉತ್ತರ ಕನ್ನಡ	594 ಹೆ	2.970	-	-	-	-	-	-
	ಒಟ್ಟು	3200 ಹೆ	16.00	-	1700	0.850	-		

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ನಾನು ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಬೆಳೆಗೆ ತಗಲತಕ್ಕಂಥ ರೋಗದ ಬಗ್ಗೆ ಕೇಳಿದ್ದೆ. ಅವರು ಮತ್ತೆ ಹಳೇ ಉತ್ತರ ಕೊಟ್ಟಿದ್ದಾರೆ. ನಮಗೆ ಗೊತ್ತು ಸುಳಿ ಕೊಳೆಯತಕ್ಕಂಥ ರೋಗ ಮತ್ತು ಅಡಿಕೆ ಕೊಳೆಯತಕ್ಕಂಥ ರೋಗಗಳಿಗೆ ಯಾವ ಔಷಧಿಯನ್ನು ಸಿಂಪಡಿಸಿದರೆ ಸರಿ ಹೋಗುತ್ತದೆ ಎಂದು. ಆದರೆ ಈಗ ಹೊಸ ರೋಗ ಬಂದಿದೆ. ಆ ಹೊಸ ರೋಗದಲ್ಲಿ ನೋಡುವುದಕ್ಕೆ ಬಹಳ ಹಸುರಾಗಿಯೇ ಇರುತ್ತದೆ; ಅದು ಯಾವಾಗ ತಲೆ ಕುಸಿದುಕೊಂಡು ಬೀಳುತ್ತದೋ ಗೊತ್ತಿಲ್ಲ. ಅದನ್ನು ನಮ್ಮ ತೋಟಗಾರಿಕಾ ಇಲಾಖೆಯ ಕೆಲವರು ರೀಸರ್ಚ್ ಮಾಡತಕ್ಕಂಥವರು ಬಂದು ನೋಡಿ ಇದು ಹೊಸ ರೋಗ; ಒಂದು ತರಹದಲ್ಲಿ ಮನುಷ್ಯನಿಗೆ ತಗಲತಕ್ಕಂಥ ಏಯ್ಡ್ಸ್ ರೋಗಕ್ಕಿಂತ ಬಹಳ ಭಯಂಕರವಾದ ರೋಗ ಇದೆ; ಇದಕ್ಕೆ ಇನ್ನೂ ಔಷಧಿ ಕಂಡು ಹಿಡಿಯಲಿಕ್ಕೆ ಆಗಲಿಲ್ಲ; ಯಾವ ಹುಳದಿಂದ ಇದು ಸಾಯತ್ತದೆ ಎನ್ನತಕ್ಕಂಥಾದ್ದನ್ನು ತಿಳಿಸುವುದು ಕಷ್ಟ ಎಂದು ಹೇಳಿದ್ದಾರೆ. ಇದರ ಜೊತೆಗೆ ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಹ ಅಡಿಕೆ ಬೆಳೆಯನ್ನು ಬೆಳೆಯುತ್ತಾರೆ. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ 3 ದೊಡ್ಡ ಅಡಿಕೆ ಸಹಕಾರ ಸಂಘಗಳು ಇವೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯತ್ತದೆ ಮತ್ತು ಇದು ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಪ್ರಾಮುಖ್ಯವಾದ ಬೆಳೆಯಾಗಿರುತ್ತದೆ. ತೀರ್ಥಹಳ್ಳಿಯಲ್ಲಿ ತೋಟಗಾರಿಕೆ ಇಲಾಖೆಯವರಿಂದಲೇ ಒಂದು ರೀಸರ್ಚ್ ಇನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಅಲ್ಲಿ 25 ಎಕರೆ ಜಮೀನು ಇದೆ. ಆದರೆ ಅಲ್ಲಿ ಇಲಾಖೆಯವರೇ ನಡೆಸುತ್ತಾ ಇರುವುದರಿಂದ ಅಲ್ಲಿ ಸಮರ್ಪಕವಾಗಿ ಕೆಲಸ ಆಗುತ್ತಿಲ್ಲ. ಇಲ್ಲಿ ಇವರು ರೀಸರ್ಚನ್ನು ಯೂನಿವರ್ಸಿಟಿಯವರು ಮಾಡಬೇಕೆಂದು ಹೇಳುತ್ತಿದ್ದಾರೆ. ಯೂನಿವರ್ಸಿಟಿಯವರಿಗೆ ಕೊಡುವವರು ಯಾರು? ಇದು ತೋಟಗಾರಿಕಾ ಇಲಾಖೆಗೆ ಸಂಬಂಧಪಟ್ಟಿದ್ದು. ಆದ್ದರಿಂದ ತಾವು ಯೂನಿವರ್ಸಿಟಿಯವರಿಗೆ ವಹಿಸಿ ಕೊಡಬೇಕು. ಯೂನಿವರ್ಸಿಟಿಯವರಿಗೆ ಕೊಡದೇ ರೀಸರ್ಚ್ ಮಾಡಿಸದೇ ಹೋದರೆ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ಅಡಿಕೆ ತೋಟ ನಾಶವಾಗುತ್ತದೆ. ಇದರ ಜೊತೆಯಲ್ಲಿ ಸರ್ಕಾರಕ್ಕೂ ಸಹ ನಷ್ಟವಾಗುತ್ತದೆ. ಆದ್ದರಿಂದ ದಯವಿಟ್ಟು ಆದಷ್ಟು ಜಾಗ್ರತೆಯಾಗಿ ಶಿವಮೊಗ್ಗ ಕೇಂದ್ರದಲ್ಲಿ ಒಂದು ಯೂನಿವರ್ಸಿಟಿ ಮುಖಾಂತರ ತಾವು ರೀಸರ್ಚ್ ಇನ್‌ಸ್ಟಿಟ್ಯೂಷನ್ನನ್ನು ತೆರೆಯುತ್ತೀರಾ ಎಂಬುದನ್ನು ಈ ಸದನಕ್ಕೆ ತಿಳಿಸಬೇಕು.

ಶ್ರೀ ಎ.ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೇ, ಸದಸ್ಯರೇ ಹೇಳಿದ ರೀತಿ ಇದು ಹೊಸ ರೋಗ ಅಂತ ಹೇಳಿ ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಹೊಸರೋಗಕ್ಕೆ ಹೊಸ ಮದ್ದು ಕಂಡು ಹಿಡಿಯಬೇಕಾಗುತ್ತದೆ. ಹೊಸ ಮದ್ದು ಕಂಡು ಹಿಡಿಯಬೇಕಾದರೆ ತೋಟಗಾರಿಕಾ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು ಮಾಡಲಿಕ್ಕೆ ಬರುವುದಿಲ್ಲ; ತಜ್ಞರೇ ಮಾಡಬೇಕಾಗುತ್ತದೆ. ಆದ್ದರಿಂದ ನಾವು ಉತ್ತರದಲ್ಲಿ ತಮಗೆ ತಿಳಿಸಿದ್ದೇವೆ. ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಬರೆದು ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇವೆ ಎಂದು ನಾವು ಇಲಾಖೆಯಿಂದ ಏನು ಮಾಡಬಹುದು? ಅವರು ಅಲ್ಲಿ ರೀಸರ್ಚ್ ಸೆಂಟರ್ ಮಾಡುತ್ತೇವೆಂದು ಹೇಳಿದರೆ ಆರ್ಜೆಂಟಾಗಿ ನೆಲ ಕೊಡುತ್ತೇವೆ ಜೊತೆಗೆ ಇನ್ನೂ ಏನು ಸರ್ಕಾರದಿಂದ ಅಸಿಸ್ಟೆನ್ಸ್ ಬೇಕೋ ಅದನ್ನು ಕೊಡುತ್ತೇವೆ. ಮತ್ತೊಂದು ಬಜೆಟ್ ಅಲೋಕೇಷನ್ಸ್ ಕೂಡ ಅವರು ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಹೊಸದಾಗಿ ಈ ಕಾಯಿಲೆ ಬಂದಿದೆ; ಹೊಸದಾಗಿ ಬಂದಿರುವ ಈ ಖಾಯಿಲೆಗೆ ಹಣ ಮತ್ತು ಲ್ಯಾಂಡ್ ಎರಡೂ ಕೂಡ ಒದಗಿಸಬೇಕಾದರೆ ಬಜೆಟ್ ಪ್ರಾವಿಷನ್ ಮಾಡಿಕೊಳ್ಳಬೇಕಾಗುತ್ತದೆ. ತಾವುಗಳು ನನಗೆ ಬರೆದ ಮೇಲೆ ನಾನು ಎಲ್ಲಾ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ತುರ್ತಾಗಿ ಅಗ್ರಿಕಲ್ಚರ್ ಯುನಿವರ್ಸಿಟಿಗೆ

ಹೇಳಿ ಕ್ರಮ ತೆಗೆದುಕೊಳ್ಳುವುದು ಒಂದು, ಹಾಗೆಯೇ ರಿಸರ್ಚ್ ಸೆಂಟರನ್ನು ಪ್ರಾರಂಭ ಮಾಡಲು ಏನೆಲ್ಲಾ ಸಹಕಾರವನ್ನು ಕೊಡಬೇಕು ಅದನ್ನು ಕೊಡಲು ನಾವುಗಳು ಸಿದ್ಧರಿದ್ದೇವೆ. ಆ ಕೆಲಸವನ್ನು ಮಾಡಿ ಎಂದು ಅವರಿಗೆ ಸರಕಾರದ ಕಡೆಯಿಂದ ಸೂಚನೆ ತ್ವರಿತವಾಗಿ ಹೋಗುತ್ತಾ ಇದೆ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ ಅಂದರೆ, ಶಿವಮೊಗ್ಗದಲ್ಲಿ ಈಗಾಗಲೇ ಅಗ್ರಿಕಲ್ಚರ್ ಯೂನಿವರ್ಸಿಟಿಯು ಇದೆ. ಅದರಲ್ಲಿ ತೋಟಗಾರಿಕೆಯೂ ಬರುತ್ತದೆ. ಇವರ ಇಲಾಖೆಯಲ್ಲಿ ಈ ವಿಚಾರ ಇದೆ. ಇವರು ಹೇಳತಕ್ಕಂಥ ರೀತಿಯಲ್ಲಿ ನಮ್ಮಲ್ಲಿ ಬಜೆಟ್ ಇಲ್ಲ, ಇದಕ್ಕೆ ಬಜೆಟನ್ನು ಕ್ರಿಯೇಟ್ ಮಾಡಿಕೊಳ್ಳಬೇಕಾಗುತ್ತದೆ ಅಂದರೆ, ಈಗಿರುವ ಅಡಿಕೆ ತೋಟಗಳೆಲ್ಲಾ ಹಾಳಾದ ಮೇಲೆ ಇವರು ಬಜೆಟ್ ಮಾಡಿಕೊಳ್ಳುತ್ತಾರೆಯೇ? ಇದು ವ್ಯಾಪಕವಾಗಿ ಹರಡಿರತಕ್ಕಂಥ ರೋಗ. ಇದನ್ನು ಕೂಡಲೇ ಪತ್ತೆ ಹಚ್ಚಿ ಅದಕ್ಕೆ ತಕ್ಕ ಔಷಧಿಯನ್ನು ಕಂಡು ಹಿಡಿಯದೇ ಹೋದರೆ ಯಾವುದೇ ಅಡಿಕೆ ತೋಟವೂ ಕೂಡ ಉಳಿಯದೇ ಇರತಕ್ಕಂಥ ಪರಿಸ್ಥಿತಿಯು ಇದೆ. ಆದ್ದರಿಂದ ಕೂಡಲೇ ಶಿವಮೊಗ್ಗದ ಅಗ್ರಿಲಕ್ಚರ್ ಯೂನಿವರ್ಸಿಟಿಯಲ್ಲಿ ರಿಸರ್ಚ್ ಸೆಂಟರನ್ನು ಪ್ರಾರಂಭ ಮಾಡುವುದಕ್ಕೆ ಸರಕಾರವು ಆದ್ಯತೆಯ ಮೇರೆಗೆ ಕ್ರಮ ತೆಗೆದುಕೊಳ್ಳಬಯಸುತ್ತದೆಯೇ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ :- ಈ ಬಗ್ಗೆ ತುರ್ತಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಪ್ರೊ :ಎಂ.ಡಿ. ನಂಜುಂಡಸ್ವಾಮಿ :- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ತೋಟಗಾರಿಕಾ ಸಚಿವರು ಈ ಹೊಸ ರೋಗದ ಬಗ್ಗೆ ಗಮನಕ್ಕೆ ತೆಗೆದುಕೊಂಡ ಹಾಗೆ ಇಲ್ಲ. ಇದು ಒಂದು ವರ್ಷದಿಂದೀಚೆಗೆ ಕಾಣಿಸಿಕೊಂಡಿರುವಂಥ ರೋಗ. ಈಗಾಗಲೇ ನೂರಾರು ಎಕರೆಯಲ್ಲಿರುವ ಅಡಿಕೆ ಗಿಡಗಳು ಹತ್ತು ವರ್ಷ ತಲುಪುತ್ತಿರುವ ಹಾಗೆಯೇ ಸುಳಿ ಮುರಿದು ಸಾಯುತ್ತಾ ಇವೆ. ನಾವು ಒಂದು ವರ್ಷದಿಂದ ನಿಮ್ಮ ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ಸಂಪರ್ಕ ಮಾಡಿದ್ದೇವೆ. ಅವರಿಂದ ಇದನ್ನು ಪತ್ತೆ ಮಾಡುವುದು ಇನ್ನೂ ಆಗಿಲ್ಲ. ಈಗ ರೈತರೇ ಪತ್ತೆ ಮಾಡಿದ್ದಾರೆ. ಈಗ ಹೊಸದಾಗಿ ಒಂದು ಸಣ್ಣ ಹುಳು ಕಾಣಿಸಿಕೊಂಡಿದೆ. ಇದು ವ್ಯಾಪಕವಾಗಿ ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಕಾಣಿಸಿಕೊಂಡಿದೆ. ಇದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಸಾವಿರಾರು ಎಕರೆ ಅಡಿಕೆ ತೋಟಗಳಲ್ಲಿನ ಹತ್ತು ವರ್ಷದೊಳಗಿನ ಸಸಿಗಳು ಸತ್ತು ಹೋಗುತ್ತವೆ. ಆದ್ದರಿಂದ ನಾನು ತಮಗೆ ರೈತರ ಪರವಾಗಿ ಆಶ್ವಾಸನೆ ಕೊಡುತ್ತೇನೆ. ಭದ್ರಾವತಿ ತಾಲ್ಲೂಕಿನಲ್ಲಿ ಇದಕ್ಕೆ ಬೇಕಾದ ಭೂಮಿ ಮತ್ತು ಕಟ್ಟಡವನ್ನು ನಾನು ಕೊಡಿಸುತ್ತೇನೆ. ನಾವು ಇದಕ್ಕಾಗಿ ಕಟ್ಟಡವನ್ನು ತಯಾರು ಮಾಡಿದ್ದೇವೆ. ಇವರ ಜೊತೆಯಲ್ಲಿ ಪತ್ರ ವ್ಯವಹಾರವನ್ನು ಕೂಡ ಮಾಡಿದ್ದೆವು. ಇವರಿಂದ ಸಾಧ್ಯವಿಲ್ಲ ಎಂಬ ಉತ್ತರವು ಕೂಡ ನಮಗೆ ಬಂದಿದೆ. ನಾನು ಐದನೇ ತಾರೀಖಿಗೆ ಹೋಗಿ ಅಡಿಕೆ ಸಂಶೋಧನ ಕೇಂದ್ರ ಮತ್ತು ರೈತ ಸಂಶೋಧನ ಕೇಂದ್ರವನ್ನು ಉದ್ಘಾಟನೆ ಮಾಡಬೇಕಾಗಿದೆ. ಈಗ ನಾನು ಮಾಡಲೋ ಅಥವಾ ನೀವು ತಕ್ಷಣ ಮಾಡುತ್ತೀರೋ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಎ.ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೇ, ಇದು ಹೊಸ ಕಾಯಿಲೆ ಮತ್ತು ಇದರ ಬಗ್ಗೆ ಅನುಭವ ಕೂಡ ಹೊಸದಾಗಿ ಆಗಿದೆ. ಈಗಾಗಲೇ ಈ ಬಗ್ಗೆ ನಾವು ವಿಜ್ಞಾನಿಗಳ ಜೊತೆಗೆ ಸಂಪರ್ಕ ಮಾಡಿದ್ದೇವೆ. ಇವೊತ್ತು ಒಂದು ಸುತ್ತಿನ ಮಾತುಕತೆಗಳನ್ನು ಮಾಡಿ ಮುಗಿಸಿ ಇಲ್ಲಿಗೆ ಬಂದಿದ್ದೇನೆ. ಆ ಟೀಮ್‌ನ್ನು ಆದಷ್ಟು ಬೇಗ ಆ ತಾಲ್ಲೂಕಿಗೆ ಮತ್ತು ಆ ಜಿಲ್ಲೆಗೆ ಕಳುಹಿಸಿಕೊಡುತ್ತೇನೆ. ಅವರು ಮಾಹಿತಿಗಳನ್ನು ತೆಗೆದುಕೊಂಡು ವಾಪಸ್ ಬರಲಿ; ಆಮೇಲೆ ಸರಕಾರ ಏನೆಲ್ಲಾ ಸಹಕಾರ ಕೊಡಬೇಕೋ ಅದನ್ನೆಲ್ಲ ಕೊಟ್ಟು ಆ ಕಾಯಿಲೆಯನ್ನು ನಿಯಂತ್ರಣ ಮಾಡುವುದಕ್ಕೆ ನಮ್ಮ ಸಹಕಾರ ಇದ್ದೇ ಇದೆ ಎಂದು ಆಗಲೇ

ಹೇಳಿದ್ದೇನೆ. ಇದರಿಂದ ರಾಜ್ಯ ಬೊಕ್ಕಸಕ್ಕೆ ಮತ್ತು ರೈತರಿಗೂ ನಷ್ಟ ಆಗುತ್ತದೆ ಎಂಬುದು ನಮಗೆ ಗೊತ್ತಾಗಿದೆ. ಆದ್ದರಿಂದ ವಿಜ್ಞಾನಿಗಳ ಟೀಮನ್ನು ಅಲ್ಲಿಗೆ ಕಳುಹಿಸುತ್ತೇನೆ, ಅವರು ಬಂದ ನಂತರ ಕೂಡಲೇ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳ ಬೇಕೆಂದು ನೋಡಿ ಆ ಕ್ರಮವನ್ನು ತೆಗೆದುಕೊಳ್ಳಲು ಸರಕಾರವು ಸಿದ್ಧವಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ : – ಮಾನ್ಯ ಅಧ್ಯಕ್ಷರೇ, ಈ ರೋಗದ ವಿಚಾರವು ಸಚಿವರಿಗೆ ಹೊಸದಾಗಿ ಗಮನಕ್ಕೆ ಬಂದಿರಬಹುದು. ಆದರೆ ಕಳೆದ ಒಂದು ವರ್ಷದಿಂದಲೂ ಕೂಡ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಈ ರೋಗ ಹಬ್ಬಿ ತೊಂದರೆಯುಂಟಾಗುತ್ತಿದೆ. ಸೆಂಟ್ರಲ್ ಗವರ್ನಮೆಂಟ್‌ಗೆ ಸಂಬಂಧಪಟ್ಟ ರಿಸರ್ಚ್‌ಸೆಂಟರ್ ಕಾಸರಗೋಡು ಮತ್ತು ವಿಟ್ಲದಲ್ಲಿ ಇದೆ. ಆದರೆ ಆಶ್ಚರ್ಯ ಅಂದರೆ ತಮ್ಮ ಇಲಾಖೆಗೂ ಮತ್ತು ಆ ರಿಸರ್ಚ್‌ಸೆಂಟರ್‌ಗೂ ಯಾವುದೇ ರೀತಿಯ ಸಂಬಂಧ ಇಲ್ಲ. ಒಂದು ಕಡೆಯಲ್ಲಿ ರೈತರು ಬೇಳೆದ ಎಲ್ಲಾ ಬೆಳೆಗಳ ಬಗ್ಗೆ ನೀವು ತೋಟಗಾರಿಕೆ ಇಲಾಖೆಯಿಂದ ಪಟ್ಟಿ ಕೊಡುತ್ತೀರಿ. ಆದರೆ ಆ ರೈತರಿಗೂ ನಿಮ್ಮ ಇಲಾಖೆಗೂ ಯಾವ ರೀತಿಯ ಸಂಪರ್ಕವೂ ಇಲ್ಲ. ಬಜೆಟ್ ಇಲ್ಲ ಎಂಬುದು ತಮ್ಮ ಉತ್ತರ ಆಗಬಾರದು ತಾವುಗಳು ಬಜೆಟನ್ನು ಯಾವ ರೀತಿಯಲ್ಲಾದರೂ ಮಾಡಿಕೊಳ್ಳಬೇಕು. ನ್ಯಾಚುರಲ್ ಕೆಲಾಮಿಟಿ ಅಥವಾ ಬೇರೆಯಾವುದಾದರೂ ಒಂದನ್ನು ಆಳಪಡಿಸಿಕೊಂಡು , ಕ್ರಮ ತೆಗೆದುಕೊಳ್ಳಬೇಕು. ಟೀಮ್ ಕಳುಹಿಸಿ ವರದಿ ತರಿಸಿಕೊಳ್ಳುವುದರಿಂದ ಯಾವ ರೀತಿಯಿಂದಲೂ ಈ ರೋಗ ನಿವಾರಣೆಯಾಗುವುದಿಲ್ಲ. ತಾವುಗಳು ಸ್ವತಃ ಭೇಟಿ ಕೊಟ್ಟು ರೋಗವನ್ನು ತಡೆಗಟ್ಟಲು ಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : – ಮಾನ್ಯ ಸದಸ್ಯರು ಹೇಳುವ ಮಾತು ಬಹಳ ಆಶ್ಚರ್ಯವನ್ನುಂಟು ಮಾಡುತ್ತದೆ. ಈ ರೋಗ ಹೊಸದು ಅಂದಮೇಲೆ ಎಲ್ಲರಿಗೂ ಈ ಬಗ್ಗೆ ಹೊಸ ಅನುಭವ ಆಗಿದೆ. ಬಜೆಟ್ ಸಾಂಕ್ಷನ್ನನ್ನು ನಾವು ರೋಗ ಬರುತ್ತದೆ ಎಂದು ಇಟ್ಟುಕೊಂಡಿರುವುದಿಲ್ಲ. ರೈತರಿಗೆ ಆಗುತ್ತಿರುವ ಸಂಕಷ್ಟಗಳು ನಮಗೆ ಗೊತ್ತಿದೆ. ಅಲ್ಲಿಗೆ ಅಧಿಕಾರಿಗಳನ್ನು ತುರ್ತಾಗಿ ಕಳುಹಿಸುತ್ತಿದ್ದೇನೆ ಎಂದು ಹೇಳಿದ್ದೇನೆ. ಮೊದಲು ನಾವು ವರದಿ ತರಿಸಿಕೊಳ್ಳಬೇಕು. ನಮಗೆ ಕಳಕಳಿ ಇದೆ. ತುರ್ತಾಗಿ ವಿಜ್ಞಾನಿಗಳನ್ನು ಮತ್ತು ಅಧಿಕಾರಿಗಳನ್ನು ಕಳುಹಿಸುತ್ತೇನೆ. ನಾನೂ ಆ ತಾಲ್ಲೂಕಿಗೆ ಬರುತ್ತೇನೆ.

ಪ್ರೊ ಎಂ. ಡಿ ನಂಜುಂಡಸ್ವಾಮಿ : ವಿಟ್ಲದಲ್ಲಿರುವ ಕೇಂದ್ರ ಏನಿದೆ ಅದು ಕೆಲಸ ಮಾಡುತ್ತಿಲ್ಲ, ಅದನ್ನು ಶಿವಮೊಗ್ಗಕ್ಕೆ ವರ್ಗ ಮಾಡಿ. ಆಷ್ಟಾದರೂ ಮಾಡಿ.

ಅಧ್ಯಕ್ಷರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರೇ, ನಿಮ್ಮ ಪ್ರಶ್ನೆಗೆ ಒಂದು ವಾರ ಟೈಂ ಕೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸಾರ್, ನನ್ನ ಪ್ರಶ್ನೆಗೆ ಯಾವತ್ತೂ ಹೀಗೇನೇ? ಸರ್ಕಾರಕ್ಕೇನು ನಾಚಿಕೆಗೀಚಿಕೆ ಇಲ್ಲವೇ? ಇದು ನಾಚಿಕಗೇಡು ಸರ್ಕಾರವಾಗಿದೆ. ಯಾವ ಪ್ರಶ್ನೆ ಕೇಳಿದರೂ ಉತ್ತರ ಇಲ್ಲ ಎನ್ನುತ್ತಾರೆ ಏತಕ್ಕಾಗಿ ಉತ್ತರ ಕೊಡುವುದಿಲ್ಲ ? ಇದಕ್ಕೆ ಕಾರಣಗಳೇನು?

ಶ್ರೀ ಎಂ.ವೈ. ಘೋರ್ಪಡೆ : – (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) : – ನಾಗಮಾರಪಲ್ಲಿಯವರೇ, ನಾನೇ ತಮ್ಮ ಡಿಸ್ಟ್ರಿಕ್ಟಿಗೆ ಬಂದಾಗ ಕೂಲಂಕಷವಾಗಿ ಇದರ ಬಗ್ಗೆ ಚರ್ಚೆ ನಡೆದದ್ದು ತಮಗೆ ಗೊತ್ತಿದೆ. ಏನು ಸಾಧ್ಯ ಆದನ್ನು ಮಾಡಿದ್ದೇವೆ. ನಮ್ಮ ಕಷ್ಟ ಏನೆಂದರೆ ನೀವು ವಿಲೇಜ್‌ವೈಸ್ ಅಂಕಿಅಂಶ ಕೇಳಿದ್ದೀರಿ. ನಾವು ಸರಿಯಾದ ಅಂಕಿಅಂಶ ಕೊಡಬೇಕಾದರೆ ಸ್ವಲ್ಪ ಮಾಹಿತಿ ತರಿಸಬೇಕಾಗುತ್ತದೆ. ನೀವು ಇಷ್ಟು ಸಿಟ್ಟಾಗುವ ಪ್ರಸಂಗ ಇಲ್ಲ. ಏಕೆಂದರೆ ಬೋರ್‌ವೆಲ್ಸ್,

ಮಿನಿವಾಟರ್, ಪೈಪ್‌ವಾಟರ್ ಎಷ್ಟೆಷ್ಟು ನಾವು ಮಾಡುತ್ತಿದ್ದೇವೆ ಯಾವ ಆಧಾರದ ಮೇಲೆ ಮಾಡುತ್ತಿದ್ದೇವೆ, ಎಂಬುದೆಲ್ಲಾ ನಿಮಗೆ ಗೊತ್ತಿದೆ. ಈಗ ತಾವು ತಾಲೂಕುವೈಸ್ ವಿಲೇಜ್‌ವೈಸ್ ಮಾಹಿತಿ ಕೇಳಿದ್ದೀರಿ. ಆ ಮಾಹಿತಿಯನ್ನು ಸಂಗ್ರಹಿಸಲಿಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆ ದಿನ ಪ್ರಶ್ನೆ ಕೇಳಿದೆ ಆದಕ್ಕೆ ; ಉತ್ತರವಿಲ್ಲ ; ಹಸಿರು ಕಾರ್ಡು ಪ್ರಶ್ನೆ ಕೇಳಿದೆ, ಆದಕ್ಕೂ ಉತ್ತರವಿಲ್ಲ. ಇದೊಂದೇ ಅಲ್ಲ, ನನ್ನ ಮೂರ್ನಾಲ್ಕು ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರ ಇಲ್ಲಾಂದರೆ ಕಾರಣವೇನು?

ಅಧ್ಯಕ್ಷರು : – ಆಯಿತು, ಒಂದು ವಾರ ಟೈಂ ಕೇಳಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ : ಆ ಮಾಹಿತಿ ಬಂದ ತಕ್ಷಣ ಉತ್ತರ ಕಳುಹಿಸಿ ಕೊಡುತ್ತೇವೆ.

ವಿಷಯ : – ಪಶುವೈದ್ಯಕೀಯ ಮಹಾವಿದ್ಯಾಲಯದ ಆರಂಭ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 130(490)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : –

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪಟೂರು ತಾಲ್ಲೂಕು ಕೊನೆಹಳ್ಳಿಯಲ್ಲಿ ಕೃಷಿ ಇಲಾಖೆಯ ಅಡಿಯಲ್ಲಿ ಸುಮಾರು ಒಂದು ಸಾವಿರ ಎಕರೆ ವಿಸ್ತೀರ್ಣದ ಅಮೃತಮಹಲ್ ಕಾವಲು ಮತ್ತು ವಿವಿಧ ರೀತಿಯ ಕೃಷಿ ಹಾಗೂ ಪಶುಸಂಗೋಪನಾ ಇಲಾಖೆಗಳ ತರಬೇತಿ ಕಾರ್ಯಕ್ರಮಗಳಿಗೆ ಸೌಲಭ್ಯಗಳಿರುವುದು ಸರ್ಕಾರದ ಗಮನದಲ್ಲಿದೆಯೇ.

ಆ) ಹಾಗಿದ್ದಲ್ಲಿ ಯಾವುದೇ ಕೃಷಿ ಆಧಾರಿತ ಕಾಲೇಜು ಇಲ್ಲದೆ ಇರುವ (ಕೃಷಿ ಪಶು ಸಂಗೋಪನಾ ರೇಷ್ಮೆ, ತೋಟಗಾರಿಕೆ ಇತರೆ) ತುಮಕೂರು ಜಿಲ್ಲೆಯಲ್ಲಿ ಪಶುವೈದ್ಯಕೀಯ ಕಾಲೇಜನ್ನು ಆರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಇ) ಕೊನೇಹಳ್ಳಿ ಸದರಿ ಕಾಲೇಜನ್ನು ಪ್ರಾರಂಭಿಸಲು ಸೂಕ್ತವಾದುದಲ್ಲವೇ.

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರ ನಿಲುವೇನು?

ಶ್ರೀ ಎನ್.ಹುಚ್ಚಮಾಸ್ತಿಗೌಡ(ಕೃಷಿ ಸಚಿವರು)

ಹೌದು

ತುಮಕೂರು ಜಿಲ್ಲೆಯಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪಿಸುವ ಅವಶ್ಯಕತೆ ಕಂಡು ಬಂದಿಲ್ಲ.

ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ನಾನು ಪಶುವೈದ್ಯ ಕಾಲೇಜನ್ನು ಪ್ರಾರಂಭ ಮಾಡಲಿಕ್ಕೆ ಆಗತ್ಯ ಏನಾದರೂ ಇದೆಯಾ? ಹಾಗೂ ಇದು ತುಮಕೂರು ಜಿಲ್ಲೆಯಲ್ಲಿ ಆಗುತ್ತದೆಯೇ ಎಂದು ಕೇಳಿದ್ದೇನೆ. ಸನ್ಮಾನ್ಯ ಸಚಿವರಿಗೆ ಪಶುವೈದ್ಯ ಇಲಾಖೆ ಬರುವುದಿಲ್ಲ ಎಂಬುದು ನನಗೆ ಗೊತ್ತು. ಯೂನಿವರ್ಸಿಟಿ ತಮಗೆ ಬರುತ್ತದೆ ಎನ್ನುವ ಕಾರಣಕ್ಕೆ ಕೇಳಿದ್ದೇನೆ. ತುಮಕೂರು ಜಿಲ್ಲೆಗೆ ಪಶುವೈದ್ಯ ಕಾಲೇಜಿನ ಆಗತ್ಯವಿಲ್ಲ ಎಂದು ತಾವು ಉತ್ತರ ಹೇಳಿಬಿಟ್ಟರೆ ಪಶುವೈದ್ಯ ಕಾಲೇಜ್ ರಾಜ್ಯಕ್ಕೇನಾದರೂ ಆಗತ್ಯವಿದೆಯಾ ಅಥವಾ ತುಮಕೂರಿನಲ್ಲಿ ಮಾಡ್ತೀರಾ ಎಂದು ಕೇಳಿರೋದು ಸ್ವಾಮಿ. ಅದಕ್ಕೆ ತಾವೇ ಉತ್ತರ ಕೊಡ್ತೀರಾ? ಅಥವಾ ನಿಮ್ಮ ಪಶುಸಂಗೋಪನಾ ಸಚಿವರು ಉತ್ತರ ಕೊಡ್ತಾರ? ಎಂದು ನಾನು ಕೇಳುತ್ತಿದ್ದೇನೆ. ಆಗತ್ಯಾನೇ ಇಲ್ಲ ಅಂದರೆ ನೀವು ಮಿನಿಸ್ಟ್ರು ಆಗಿ ಆಚೆಕಡೆ ನಿಂತು ಭಾಷಣ ಮಾಡಿ